# ತೂಕ ನಿರ್ವಹಣೆಯ ಸರ್ವತೋಮುಖ ವಿಧಾನದಿಂದ ನಿಮ್ಮ ತೂಕ ಮತ್ತು ಬದುಕನ್ನು ನಿಯಂತ್ರಣಕ್ಕೆ ತೆಗೆದುಕೊಳ್ಳಿ



ಭಾರತದಲ್ಲಿ ಸ್ಥೂಲಕಾಯತೆ ಶೇ. 20ಕ್ಕೂ ಮೀರಿದೆ. ಅಂದಾಜು 5 ಪುರುಷರಲ್ಲಿ ಒಬ್ಬರು ಮತ್ತು 6 ಮಹಿಳೆಯರಲ್ಲಿ ಒಬ್ಬರು ಸ್ಥೂಲಕಾಯದವರಾಗಿದ್ದಾರೆ. ಕೆಲ ನಗರ ಪ್ರದೇಶಗಳಲ್ಲಿ ಇದರ ಪ್ರಮಾಣ ಶೇ. 40ಕ್ಕೂ ಮೀರಿದೆ. ಜಾಡ್ಯ ರೂಪದ ಸ್ಥೂಲಕಾಯವು ಜೀವನಪರ್ಯಂತ ಇರುವ ರೋಗವಾಗಿದ್ದು, ಇದು ಆಯಸ್ಸನ್ನೇ ಕಡಿಮೆ ಮಾಡುತ್ತದೆ. ಸಾಂಪ್ರದಾಯಿಕ ವಿಧಾನಗಳಾದ ಪಥ್ಯ, ವ್ಯಾಯಾಮ ಮತ್ತು ಜೀವನಶೈಲಿಯ ಮಾರ್ಪಾಡುಗಳು ಈ ರೋಗಿಗಳಿಗೆ ಸಹಕಾರಿಯಾಗಲಾರವು.

ಶಾರೀರಿಕ ಪ್ರಮಾಣ ಸೂಚ್ಯಂಕವು (BMI) 32.5ಕ್ಕೂ ಮೇಲಿದ್ದು, ಸಹ ರೋಗಗಳಾದ ಮಧುಮೇಹ ಅಥವಾ ಅಧಿಕ ರಕ್ತದೊತ್ತಡ ಇದ್ದಾಗ, ಬೇರಿಯಾಟ್ರಿಕ್ ಶಸ್ತ್ರಚಿಕಿತ್ಸೆಯೇ ತೂಕ ಕಡಿಮೆ ಮಾಡಿಕೊಳ್ಳುವ ಸೂಕ್ತ ವಿಧಾನವೆಂದು ವೈದ್ಯಕೀಯವಾಗಿ ರುಜುವಾತಾಗಿದೆ. ಇದೊಂದು ಅತ್ಯಲ್ಪ ಅತಿಕ್ರಮಿ ಕೀ ಹೋಲ್ ಮಾದರಿಯ ಶಸ್ತ್ರಚಿಕಿತ್ಸೆಯಾಗಿದೆ. ಬೇರಾವ ವಿಧಾನವೂ ಪ್ರಮಾಣಿತ ಮತ್ತು ಶಾಶ್ವತ ಫಲಿತಾಂಶಗಳನ್ನು ನೀಡುವುದಿಲ್ಲ.

ತೆರೆದ ಶಸ್ತ್ರಚಿಕಿತ್ಸೆಗಿಂತ ಅಲ್ಪ ಅತಿಕ್ರಮಿ ಪದ್ಧತಿಯಾದ ಬೇರಿಯಾಟ್ರಿಕ್ ಶಸ್ತ್ರಚಿಕಿತ್ಸೆ ತುಂಬಾ ಸುರಕ್ಷಿತ. ಇದರಲ್ಲಿ ಅತ್ಯಲ್ಪ ತೊಡಕುಗಳಿದ್ದು, ರೋಗಿಗಳು ತ್ವರಿತವಾಗಿ ಗುಣಹೊಂದಿ ಬಹುಬೇಗನೆ ತಮ್ಮ ಕೆಲಸದಲ್ಲಿ ತೊಡಗಬಹುದು. ತೆರೆದ ಶಸ್ತ್ರಚಿಕಿತ್ಸೆಗೆ ಹೋಲಿಸಿದರೆ, ಈ ಪ್ರಕ್ರಿಯೆಯಲ್ಲಿ ಹೊಟ್ಟೆಯಲ್ಲಿ ಸಣ್ಣ ಕತ್ತರಿಪ್ರಯೋಗ (0.5 ರಿಂದ 1ಸೆ.ಮೀ.) ಮಾಡಿ, ಒಳಗಡೆ ಸಣ್ಣ ಕ್ಯಾಮರಾ ಅಳವಡಿಸುವುದರಿಂದ ಸಂಪೂರ್ಣ ದೃಶ್ಯಾವಳಿ ಲಭ್ಯವಾಗುತ್ತದೆ.

ನಮ್ಮ ದೇಶದಲ್ಲಿ ಸ್ಲೀವ್ ಗ್ಯಾಸ್ಟ್ರೆಕ್ಟೊಮಿ ಮತ್ತು ಗ್ಯಾಸ್ಟ್ರಿಕ್ ಬೈಪಾಸ್ ಎಂಬ ಎರಡು ಚಿಕಿತ್ಸಾ ಪ್ರಭೇದಗಳು ಜನಪ್ರಿಯವಾಗಿವೆ. ಆರೋಗ್ಯಕರ ಮತ್ತು ಆನಂದದಾಯಕ ಜೀವನ ನಡೆಸುವಲ್ಲಿ ಪರಿಣಾಮಕಾರಿ ಹಾಗೂ ಶಾಶ್ವತ ವಿಧಾನಗಳಾದ ಎರಡೂ ಪ್ರಕ್ರಿಯೆಗಳನ್ನು ಜನರಲ್ ಅನಸ್ತೇಷಿಯಾದಡಿ ಕೀ ಹೋಲ್‌ಗಳೊಂದಿಗೆ (ಲ್ಯಾಪ್ರೋಸ್ಕೋಪಿಕ್) ಮಾಡಲಾಗುತ್ತದೆ ಮತ್ತು ಅಂದಾಜು 2 ಗಂಟೆಗಳ ಕಾಲ ತೆಗೆದುಕೊಳ್ಳುತ್ತದೆ. ವ್ಯಕ್ತಿಯು 2 ರಿಂದ 3 ದಿನಗಳವರೆಗೆ ಆಸ್ಪತ್ರೆಯಲ್ಲಿ ಉಳಿದುಕೊಳ್ಳಬೇಕಾಗುತ್ತದೆ ಮತ್ತು ಯಾವುದೇ ವಿಶ್ರಾಂತಿ ಬೇಕಿರುವುದಿಲ್ಲ.

ಪ್ರಕ್ರಿಯೆಯ ನಂತರ ಹಸಿವು ಕಡಿಮೆಯಾಗುತ್ತದೆ ಮತ್ತು ತಿನ್ನುವುದು ತಹಬಂದಿಗೆ ಬರುತ್ತದೆ ಹಾಗೂ ಅಂದಾಜು 6 ರಿಂದ 8 ತಿಂಗಳಲ್ಲಿ ತೂಕ ಕಡಿಮೆಯಾಗುತ್ತದೆ. ಶಸ್ತ್ರಚಿಕಿತ್ಸೆಯನ್ನು ಅತ್ಯಂತ ಸುಲಭವಾಗಿಸುವಲ್ಲಿ ಈ ಕ್ಷೇತ್ರದ ತಂತ್ರಜ್ಞಾನ, ಯಂತ್ರೋಪಕರಣ ಮತ್ತು ಅನುಭವದಲ್ಲಿ ಪ್ರಬಲವಾದ ಪ್ರಗತಿ ಕಂಡುಬಂದಿದೆ.

ಶಸ್ತ್ರಚಿಕಿತ್ಸೆಯ ನಂತರದ ಯಶಸ್ಸು ಒಂದು ದೀರ್ಘಾವಧಿ ಯೋಜನೆ. ಅಧ್ಯಯನಗಳ ಶೋಧನೆಯಂತೆ ರೋಗಿಗಳು ಗುಣವಾಗುವುದಲ್ಲದೆ ಅವರಲ್ಲಿ ಸ್ಲೀಪ್ ಅಪೆನಿಯಾ, ರಕ್ತದೊತ್ತಡ, ಮಧುಮೇಹ, ಮೆಟಾಬೋಲಿಕ್ ಸಿಂಡ್ರೋಮ್ ಮತ್ತಿತರ ಸ್ಥೂಲಕಾಯ ಸಂಬಂಧಿತ ಸಮಸ್ಯೆಗಳು ಕಂಡುಬರುವುದಿಲ್ಲ. ರೋಗಿಗಳು ಖಿನ್ನತೆಯಿಲ್ಲದೆ, ಈ ಹಿಂದೆ ಮಾಡಲಸಾಧ್ಯವಾದದನ್ನು ಕುಟುಂಬ ಸದಸ್ಯರೊಂದಿಗೆ ಆನಂದಿಸಲು ಸಾಧ್ಯವಾಗುತ್ತದೆ. ಬದುಕಿನ ಗುಣಮಟ್ಟ ವ್ಯಾಪಕವಾಗಿ ಸುಧಾರಿಸುತ್ತದೆ. ಉದ್ಯೋಗಾವಕಾಶ ಮತ್ತು ಸಾಮಾಜಿಕ ಜೀವನವೂ ಸಹ ಸುಧಾರಿಸುತ್ತದೆ.

ಶಸ್ತ್ರಚಿಕಿತ್ಸೆಯ ನಂತರ ಜೀವನಶೈಲಿಯ ಬದಲಾವಣೆಗಳಿಗೆ ಜೀವನದುದ್ದಕ್ಕೂ ಬದ್ಧರಾಗಬೇಕಿರುತ್ತದೆ. ದಿನಂಪ್ರತಿ ವ್ಯಾಯಾಮ ಮತ್ತು ಪೋಷಕಾಂಶಗಳುಳ್ಳ ಪಥ್ಯಕ್ರಮ ಅನುಸರಿಸಬೇಕಾಗುತ್ತದೆ. ದಿನವೊಂದಕ್ಕೆ ಅಂದಾಜು 60 ರಿಂದ 80 ಗ್ರಾಂ.ಗಳ ಪೋಷಕಾಂಶಗಳು ಅಗತ್ಯವಿರುತ್ತವೆ. ಪಥ್ಯದಲ್ಲಿ ಕಾರ್ಬೋಹೈಡ್ರೇಟ್ಸ್ ಮತ್ತು ಕೊಬ್ಬಿನ ಅಂಶ ತುಂಬಾ ಕಡಿಮೆ ಇರುತ್ತದೆ.

**ಡಾ. ಹೆಚ್.ವಿ. ಶಿವರಾಮ್‌ರವರು**, ಬೆಂಗಳೂರಿನ ಕೊಲಂಬಿಯಾ ಏಷ್ಯಾ ರೆಫೆರಲ್ ಆಸ್ಪತ್ರೆಯಲ್ಲಿ ಬೇರಿಯಾಟ್ರಿಕ್, ಅತ್ಯಲ್ಪ ಅತಿಕ್ರಮಿ ಮತ್ತು ಗ್ಯಾಸ್ಟ್ರೊ-ಇಂಟೆಸ್ಟಿನಲ್ ಶಸ್ತ್ರಚಿಕಿತ್ಸೆಯ ಮುಖ್ಯಸ್ಥರಾಗಿದ್ದು ಜಾಡ್ಯ ರೂಪದ ಸ್ಥೂಲಕಾಯತೆಯ ನಿರ್ವಹಣೆಯಲ್ಲಿ ವ್ಯಾಪಕ ಅನುಭವವುಳ್ಳವರಾಗಿದ್ದಾರೆ. ಭಾರತದಲ್ಲೂ, ವಿದೇಶದಲ್ಲೂ ಅನೇಕ ರೋಗಿಗಳು ಇವರ ಲ್ಯಾಪ್ರೊಸ್ಕೋಪಿಕ್ ಚಿಕಿತ್ಸಾ ವಿಧಾನದಿಂದ ಲಾಭ ಪಡೆದಿರುತ್ತಾರೆ.



**ಡಾ. ಹೆಚ್.ವಿ. ಶಿವರಾಮ್**
ಗ್ಯಾಸ್ಟ್ರೊ-ಇಂಟೆಸ್ಟಿನಲ್ ಮತ್ತು ಬ್ಯಾರಿಯಾಟ್ರಿಕ್ ಶಸ್ತ್ರಕ್ರಿಯೆಯ ಮುಖ್ಯಸ್ಥ,
ಕೊಲಂಬಿಯಾ ಏಷ್ಯಾ ಹಾಸ್ಪಿಟಲ್ಸ್,
ಬೆಂಗಳೂರು, ಭಾರತ.

### ಸ್ಥೂಲಕಾಯವನ್ನು ಹೇಗೆ ನಿರ್ವಹಿಸಬಹುದಾಗಿದೆ?

ಕೆಲವರಿಗೆ ಸ್ಥೂಲಕಾಯವನ್ನು ಕಡಿಮೆ ಮಾಡುವುದು ಇತರರಿಗೆ ತೂಕ ಹೆಚ್ಚಿಸುವಷ್ಟೇ ಕಷ್ಟಕರ. ಇದಕ್ಕೆ ಬಹು ಶಿಸ್ತಿನ ನಿರ್ಧರಣೆ ಅಗತ್ಯವಿದೆ. ಸಮಸ್ಯೆಯನ್ನು ಕಂಡುಹಿಡಿದು ಯೋಜಿತ ಮತ್ತು ಖಚಿತವಾದ ಚಿಕಿತ್ಸೆ ನೀಡುವಲ್ಲಿ ವಿವಿಧ ತಜ್ಞ ವೈದ್ಯರ ತಂಡವಾದ ಡಯಟ್ ತಜ್ಞ, ಎಂಡೊಕ್ರಿನಲಾಜಿಸ್ಟ್, ಮನಃಶಾಸ್ತ್ರಜ್ಞ, ಇಂಟರ್‌ನಿಸ್ಟ್, ಹೃದ್ರೋಗ ತಜ್ಞರು, ಕೌಟುಂಬಿಕ ವೈದ್ಯರು ಮತ್ತು ಬೇರಿಯಾಟ್ರಿಕ್ ತಜ್ಞರು ಶ್ರಮಿಸುತ್ತಾರೆ.

ಸ್ಥೂಲಕಾಯ ಸಂಬಂಧಿತ ಸಮಸ್ಯೆಗಳು ಹಲವು ರೀತಿಯವಾಗಿದ್ದು ಪ್ರತಿಯೊಬ್ಬರಿಗೂ ಅಗತ್ಯ ಮತ್ತು ಸೂಕ್ತವಾಗುವ ಚಿಕಿತ್ಸೆಯನ್ನು ನೀಡಬೇಕಾಗುತ್ತದೆ. ಇದರಲ್ಲಿ ಮಾನಸಿಕ ಸಹಕಾರ, ಡಯಟ್, ವ್ಯಾಯಾಮ, ಬಿಹೇವಿಯರಲ್ ಥೆರಪಿ, ಫಾರ್ಮಥೆರಪಿ ಮತ್ತು ಸ್ಥೂಲಕಾಯ ಶಸ್ತ್ರಚಿಕಿತ್ಸೆಯ ಸಂಯೋಗ ಸೇರಿದೆ.

### ಸ್ಥೂಲಕಾಯದ ಚಿಕಿತ್ಸಾ ಕ್ರಮಗಳು ಯಾವುವು?

25 ರಿಂದ 29.9ರವರೆಗೆ ಶಾರೀರಿಕ ಪ್ರಮಾಣ ಸೂಚ್ಯಂಕವುಳ್ಳ ರೋಗಿಗಳು ಹಾಗೂ ಅಧಿಕ ತೂಕವುಳ್ಳವರು ಡಯಟ್ ಮತ್ತು ವ್ಯಾಯಾಮದಿಂದ ಲಾಭ ಪಡೆಯಬಹುದು. ಆದರೆ 35 ಮತ್ತು ಮೇಲ್ಪಟ್ಟ ಸೂಚ್ಯಂಕವುಳ್ಳವರಿಗೆ ವೈದ್ಯಕೀಯವಾಗಿ ರುಜುವಾತಾದ ಸುರಕ್ಷಿತ ವಿಧಾನದ ಅಗತ್ಯವಿರುತ್ತದೆ.

ಲ್ಯಾಪ್ರೋಸ್ಕೋಪಿಕ್ ಕ್ರಿಯೆಯು ಹೊಟ್ಟೆಯಲ್ಲಿ ಹಸಿವಿನ ಹಾರ್ಮೋನುಗಳನ್ನು ಉತ್ಪತ್ತಿ ಮಾಡುವ ಸ್ಥಳವನ್ನು ತೆಗೆದುಹಾಕುತ್ತದೆ ಮತ್ತು ಹೊಟ್ಟೆಯ ಗಾತ್ರವನ್ನು ಒಂದು ಟ್ಯೂಬ್ ರೀತಿಯಲ್ಲಿ ಕಡಿಮೆ ಮಾಡುವುದರಿಂದ ಹೆಚ್ಚಾಗಿ ತಿನ್ನಲಾಗುವುದಿಲ್ಲ. ಈ ಪ್ರಕ್ರಿಯೆಯನ್ನು ವರ್ಟಿಕಲ್ ಸ್ಲೀವ್ ಗ್ಯಾಸ್ಟ್ರೆಕ್ಟೊಮಿ ಎನ್ನಲಾಗುತ್ತದೆ. ಒಂದು ವರ್ಷದಲ್ಲಿ ಹಂತಹಂತವಾಗಿ ಹೆಚ್ಚುವರಿ ತೂಕದ ಶೇ. 60ರಷ್ಟು ಇಳಿಕೆಯಾಗುತ್ತದೆ. ಕಡಿಮೆ ಕ್ಯಾಲೋರಿಯ ಆಹಾರ ಮತ್ತು ನಿಯಮಿತ ವ್ಯಾಯಾಮದಿಂದ ಇದೊಂದು ಜೀವನದುದ್ದಕ್ಕೂ ಅನುಸರಿಸಬಹುದಾದ ಆರೋಗ್ಯಕರ ಹಾದಿಯಾಗಿದೆ. ಕರುಳನ್ನು ರಿ-ರೂಟ್/ಬೈಪಾಸ್ ಮಾಡುವುದರಿಂದಲೂ ತೂಕ ಇಳಿಕೆ ಆಗುತ್ತದೆ. ಜೊತೆಗೆ ಕ್ರಮೇಣ ಆಹಾರ ಸೇವನೆಯ ಪ್ರಮಾಣ ಕಡಿಮೆಯಾಗುತ್ತದೆ (ಗ್ಯಾಸ್ಟ್ರಿಕ್ ಬೈಪಾಸ್ ಸರ್ಜರಿ).

### ಬ್ಯಾರಿಯಾಟ್ರಿಕ್ ಶಸ್ತ್ರಚಿಕಿತ್ಸೆ ಉತ್ತಮ ಆಯ್ಕೆಯೇ?

ಎಲ್ಲಾ ಪ್ರಯತ್ನಗಳ ನಂತರವೂ ತೂಕ ಇಳಿಕೆ ಕಾಣದಿದ್ದಲ್ಲಿ, ವೈದ್ಯಕೀಯ ಸ್ಥೂಲಕಾಯ ಶಸ್ತ್ರಚಿಕಿತ್ಸೆಗೆ ಒಳಗಾಗಬಹುದು. ಈ ಚಿಕಿತ್ಸೆಯು ನಡವಳಿಕೆಯ ಬದಲಾವಣೆಯೊಂದಿಗೆ ಕೂಡಿದ್ದು, ಪ್ರಸ್ತುತ ಜಾಡ್ಯ ರೂಪದ ಸ್ಥೂಲಕಾಯತೆಯ ಇಳಿಕೆಯಲ್ಲಿ ಇದೊಂದು ದೀರ್ಘಾವಧಿ ಸಾಧನೆಯಾಗಿ ರುಜುವಾತಾಗಿದೆ.

### ಸ್ಥೂಲಕಾಯ ಶಸ್ತ್ರಚಿಕಿತ್ಸೆಯ ಆರೋಗ್ಯಕರ ಲಾಭಗಳೇನು?

ಸಾಕಷ್ಟು ಸಾಮಾಜಿಕ, ಆರ್ಥಿಕ ಮತ್ತು ಆರೋಗ್ಯ ಲಾಭಗಳಿವೆ. ಮೊಣಕಾಲು ನೋವು, ನಿದ್ರಾಭಂಗ, ಗೊರಕೆ, ಅಧಿಕ ಕೊಬ್ಬು, ಅನಿಯಮಿತ ಮುಟ್ಟು, ಕಾಲು ಒದ್ದೆ ಇತ್ಯಾದಿ ಮಾಯವಾಗುತ್ತವೆ. ಮಧುಮೇಹ, ರಕ್ತದೊತ್ತಡ ಅಥವಾ ಹೃದಯ ಕಾಯಿಲೆಗಳಿಗೆ ತೆಗೆದುಕೊಳ್ಳುವ ಮಾತ್ರೆಗಳನ್ನು ನಿಲ್ಲಿಸುತ್ತದೆ ಅಥವಾ ಕಡಿಮೆ ಮಾಡುತ್ತದೆ. ರೋಗಿಗಳ ಸಂತೃಪ್ತಿಯ ಖಾತರಿಯೊಂದಿಗೆ ಒಟ್ಟಾರೆ ಇದೊಂದು ಬದುಕನ್ನು ಮಾರ್ಪಾಡಿಸುವ ಶಸ್ತ್ರಚಿಕಿತ್ಸೆಯಾಗಿದೆ. ಯಶವಂತಪುರದ ಕೊಲಂಬಿಯಾ ಏಷ್ಯಾ ರೆಫೆರಲ್ ಆಸ್ಪತ್ರೆಯಲ್ಲಿ ಬ್ಯಾರಿಯಾಟ್ರಿಕ್ ತಜ್ಞ, ಎಂಡೊಕ್ರಿನಲಾಜಿಸ್ಟ್, ಕಾಡಿಯಾಲಜಿಸ್ಟ್, ನ್ಯೂಟ್ರಿಷನಿಸ್ಟ್, ಫಿಸಿಯೊಥೆರಪಿಸ್ಟ್ ಮತ್ತು ಅನಸ್ತೇಟಿಸ್ಟ್ ತಂಡವಿದ್ದು, ಸ್ಥೂಲಕಾಯ ರೋಗಿಗಳಿಗೆ ಅಗತ್ಯ ಚಿಕಿತ್ಸೆ ನೀಡುವರು.

### ಬ್ಯಾರಿಯಾಟ್ರಿಕ್ ಶಸ್ತ್ರಚಿಕಿತ್ಸೆಯ ಅಪಾಯಗಳು ಅಥವಾ ತೊಡಕುಗಳು ಯಾವುವು?

ಶಸ್ತ್ರವೈದ್ಯರ ತಾಂತ್ರಿಕ ಜ್ಞಾನ, ಯಂತ್ರೋಪಕರಣ ಮತ್ತು ಪರಿಣತಿಯಲ್ಲಿನ ಪ್ರಗತಿಯೊಂದಿಗೆ ಸುಸಜ್ಜಿತ ಆಸ್ಪತ್ರೆಯಲ್ಲಿ ನಡೆಯುವ ಇತರೆ ಯಾವುದೇ ಶಸ್ತ್ರಕ್ರಿಯೆಯಲ್ಲಿನ ಅಪಾಯಗಳೇ ಇಲ್ಲೂ ಕಾಣಸಿಗುತ್ತವೆ. ಜೀವಕ್ಕೆ ಯಾವುದೇ ಅಪಾಯವಿಲ್ಲ ಮತ್ತು ಸಣ್ಣ ತೊಡಕುಗಳಾದ ಗಾಯ, ಅಂಟುಜಾಡ್ಯ ಅಥವಾ ಸ್ಟ್ಯಾಪಲ್ ಲೈನ್ ಸೋರುವಿಕೆಯನ್ನು ಯಶಸ್ವಿಯಾಗಿ ಗುಣಪಡಿಸಬಹುದಾಗಿದೆ.

### ಕೊಲಂಬಿಯಾ ಏಷ್ಯಾದಲ್ಲಿನ ರಿಯಾಯಿತಿ ಮತ್ತು ವಿಶೇಷ ಆಂತರಿಕ ಚಿಕಿತ್ಸಾಲಯಗಳು:

1) **ಕೀಲು ನೋವಿನ ಚಿಕಿತ್ಸಾಲಯ @ 500/-:** ಉಚಿತ ನೋಂದಣಿ, ಎರಡು ಮಂಡಿಗಳು ಮತ್ತು ಸೊಂಟದ ಕ್ಷ-ಕಿರಣ ಮತ್ತು ವಿಶೇಷ ತಜ್ಞರ ಜೊತೆಗೆ ಸಮಾಲೋಚನೆ
2) **ಸ್ತ್ರೀರೋಗ ಶಾಸ್ತ್ರದ ಆರೈಕೆಯ ಚಿಕಿತ್ಸಾಲಯ:** 40 ವರ್ಷಕ್ಕಿಂತ ಮೇಲ್ಪಟ್ಟವರಿಗೆ ಪ್ಯಾಕೇಜ್@ 1380/- & 40 ವರ್ಷಕ್ಕಿಂತ ಕೆಳಗಿನವರಿಗೆ@ 900/-
3) **ಆರೋಗ್ಯಕರ ಹೃದಯದ ಚಿಕಿತ್ಸಾಲಯ:** ಹಿರಿಯ ನಾಗರಿಕರಿಗಾಗಿ ಪ್ಯಾಕೇಜ್ @ 349/-& 30-60 ವರ್ಷಗಳ ನಡುವೆ ಇರುವವರಿಗಾಗಿ @ 399/-
4) **ಹೃದಯವಿಜ್ಞಾನದ ಚಿಕಿತ್ಸಾಲಯ @ 500/-:** ಹೃದಯತಜ್ಞರು ಮತ್ತು ಸಿಟಿವಿಎಸ್ ವಿಶೇಷ ತಜ್ಞರೊಂದಿಗೆ ಸಮಾಲೋಚನೆ
5) **ಇಎನ್‌ಟಿ - ಗೊರಕೆ ಮತ್ತು ಮೂಗಿನ ಕುಳಿಗಳ ಚಿಕಿತ್ಸಾಲಯ @ 500/-:** ಉಚಿತ ನೋಂದಣಿ ಮತ್ತು ಇಎನ್‌ಟಿ ವಿಶೇಷ ತಜ್ಞರೊಂದಿಗೆ ಸಮಾಲೋಚನೆ.
6) **ಪ್ರಾಸ್ಟೇಟ್ ಸ್ಕ್ರೀನಿಂಗ್ / ತಪಾಸಣೆ @ 1000/-:** 2 ದಿನ ಕ್ಲಿನಿಕ್‌ನಲ್ಲಿ ಯುರೋಲಾಜಿಸ್ಟ್‌ಗಳಿಂದ ಸೂಕ್ತ ಸಮಾಲೋಚನೆ.
7) **ತೂಕ ನಿರ್ವಹಣೆ @ 500/-:** ಸೂಕ್ತ ಡಯಟಿಷಿಯನ್, ತಜ್ಞ ವೈದ್ಯರು ಮತ್ತು ತೂಕ ನಿರ್ವಹಣಾ ತಜ್ಞರೊಂದಿಗೆ ಸಮಾಲೋಚನೆ.
8) **ಅನೀಮಿಯಾ ಕ್ಲಿನಿಕ್ ಸೇವೆ @ 500/-:** ಉಚಿತ ನೋಂದಣಿ, ಹೆಮಟಲಾಜಿಸ್ಟ್ (ರಕ್ತಪರೀಕ್ಷಕರು) ಮತ್ತು ಪ್ರಸೂತಿ ತಜ್ಞರೊಂದಿಗೆ ಸೂಕ್ತ ಸಮಾಲೋಚನೆ ಸೌಲಭ್ಯ.
9) **ಸ್ಪೈನ್ ಪೈನ್ ಕ್ಲಿನಿಕ್ @ 500/-:** (ಬೆನ್ನು ನೋವಿನ ಸಮಸ್ಯೆಗಳ ತಪಾಸಣೆ) (ನರರೋಗ ತಜ್ಞ) ನ್ಯೂರೋಲಾಜಿಸ್ಟ್‌ಗಳೊಂದಿಗೆ ಸೂಕ್ತ ಸಮಾಲೋಚನೆ.

COLUMBIA ASIA

INDIA | VIETNAM | MALAYSIA | INDONESIA

BANGALORE | GHAZIABAD | GURGAON | KOLKATA | MYSORE | PATIALA | PUNE

**ಯಾವುದೇ ವಿಶೇಷ ಪ್ಯಾಕೇಜ್‌ಗಾಗಿ, ದಯವಿಟ್ಟು ಕರೆ ಮಾಡಿ 09538921615.**